ಡಾ.ಭೀಮಣ್ಣ ಘನಾಥೆ
ಸರಕಾರಿ ಮಹಿಳಾ ಪ್ರತಮ ದರ್ಜೆ ಕಾಲೇಜ
ಕಲಬುರಗಿ

# ೧೮೫೭ ರ ಮಹಾದಂಗೆ (ಮಹಾಕ್ರಾಂತಿ)

೧.) ಪೀಠಿಕೆ

೨.) ಕಾರಣಗಳು

- ೧) ರಾಜಕೀಯ ಕಾರಣಗಳು
- ೨) ಆಡಳಿತಾತ್ಮಕ ಕಾರಣಗಳು.
- ೩) ಆರ್ಥಿಕ ಕಾರಣಗಳು
- ೪) ಸಾಮಾಜಿಕ ಕಾರಣಗಳು
- ೫) ಧಾರ್ಮಿಕ ಕಾರಣಗಳು
- ೬) ಸೈನೀಕ ಕಾರಣಗಳು
- ೭) ತಕ್ಷಣದ ಕಾರಣಗಳು

೩.) ಕ್ರಾಂತಿಯ ಹರಡುವಿಕೆ.

೪.) ದಂಗೆಯ ಪ್ರಕಾರ ರೀತಿ

೫.) ಕ್ರಾಂತಿಯ ದಮನ.

೬.) ಕ್ರಾಂತಿಯ ವಿಫಲತೆಗೆ ಕಾರಣಗಳು

೭.) ಕ್ರಾಂತಿಯ ಸ್ವರೂಪ.

೮.) ಕ್ರಾಂತಿಯ ಪರಿಣಾಮಗಳು.

೯.) ಉಪಸಂವಾದ.

**ಪೀಠಿಕೆ**

" ಭಾರತಿರನ್ನು ರಾಜಕೀಯಾಗಿ ಪರತಂತ್ರರನ್ನಾಗಿಸಿ, ಆರ್ಥೀಕವಾಗಿ ನಿರ್ಗತರನ್ನಾಗಿಸಿ, ಸಮಾಜಿಕವಾಗಿ ಅಸಮಾನ್ಯರನ್ನಾಗಿಸಿ, ಧಾರ್ಮಿಕವಾಗಿ ಅತಂತ್ರರನ್ನಾಗಿ ಮಾಡಿದರು."ಇವರ ಶೋಷಣೆ, ಆಕ್ರೋಶ, ದಬ್ಬಾಳಿಕೆಗೆ ಅರಸರೂ, ಪ್ರಜೆಗಳು, ಸೈನೀಕರೂ ಕೃಷೀಕರೂ, ಭೂಮಾಲೀಕರೂ, ಕುಶಲಕರ್ಮಿಗಳೂ, ಮತ್ತು ಕಲಾವಿದರು, ಬೇಸತ್ತು, ಬ್ರಿಟಿಷರ ವಿರುದ್ಧ ದಂಗೆ ಎದ್ದರು. ಈ ದಂಗೆಯನ್ನು ಬ್ರಿಟಿಷರು ಸಿಪಾಯಿದಂಗೆ ಎಂದೂ, ಭಾರತಿಯರಾದ ವಿ.ಡಿ.ಸಾವರಕರ ಇದನ್ನು ಪ್ರಥಮ ಸ್ವತಂತ್ರ್ಯ ಸಂಗ್ರಮಾ ಎಂತಲೂ ಕರೆಯುತ್ತಾರೆ.

**ಕಾರಣಗಳು.**

೧) ರಾಜಕೀಯ ಕಾರಣಗಳು ;- ಕೇವಲ ವಾಣಿಜ್ಯ ಉದ್ದೇಶ ಹೊಂದಿದ್ದ ಬ್ರಿಟಿಷರ ಈಷ್ಟ ಇಂಡಿಯಾ ಕಂಪನಿಯು, ಕಾಲಕ್ರಮೇಣ ಭಾರತಿಯರ ಅಂತಃಕಲಹದಲ್ಲಿ ಭಾಗಿಯಾಗಿ, ತಮ್ಮ ರಾಜಕೀಯ ಪ್ರಭುತ್ವ ಸಾಧೀಸಿದರು.

೧)ರಾಬರ್ಟಕ್ಲೈವ ಪ್ಲಾಸಿ,ಬಕ್ಸಾರ ಕದನ ಮಾಡಿ ಮೋಸದಿಂದ ಬಂಗಾಳದಲ್ಲಿ ಬ೦ಗಾಳದಲ್ಲಿ ಪ್ರಭುತ್ವ ಸ್ಥಾಪಿಸಿದನು.

೨) ವಾರನ್ ಹೆಸ್ಟಿಂಗ್ಸ ದ್ವೀ ಸರಕಾರ ಪದ್ದತಿ ರದ್ದು ಪಡಿಸಿ, ಬಂಗಾಳದಲ್ಲಿ ಅನೇಕ ಜನ ಸಚಿವರನ್ನೂ, ದಿವಾನರನ್ನೂ, ಕಂದಾಯ ಆಧಿಕಾರಿಗಳನ್ನೂ, ಮತ್ತು ಅನೇಕ ಉನ್ನತ ಅಧಿಕಾರಿಗಳನ್ನು ನಿರೂದ್ಯೋಗಿಗಳನ್ನಾಗಿ, ನಿರ್ಗತಿಕರನ್ನಾಗಿ ಮಾಡಿ, ಅವರ ಅಸಮಾದಾನಕ್ಕೆ ಕಾರಣನಧನು. ಈ ಅಸಮದಾನವೇ ಕ್ರಾಂತಿಗೆ ನಾಂದಿಯಾಯಿತು.

೩) ಲಾರ್ಡ ವೇಲ್ಲೆಸ್ಲಿ ಯು ಸಹಾಯಕ ಸೈನ್ಯ ಪದ್ಧತಿಯಿಂದ ಭಾರತಿಯ ಅನೇಕ ರಾಜ್ಯಗಳನ್ನು ಕಬಳಿಸಿದನು, ರಾಜ್ಯ ಕಳೆದುಕೊಂಡ ರಾಜರು, ಅವರ ಮಂತ್ರಿಗಳು, ಅಧಿಕಾರಿಗಳು, ಹೆಚ್ಚಿನ ಸಂಖ್ಯೆಯಲ್ಲಿಯ ಸೈನೀಕರ ಅಸಮದಾನವೇ ಕ್ರಾಂತಿಗೆ ಕಾರಣವಾಯಿತು.

೪) ಲಾರ್ಡಡಾಲಹೌಸಿ ಯ "ದತ್ತು ಪುತ್ರರಿಗೆ ಹಕ್ಕು ಇಲ್ಲಾ" ಎಂಬ ನೀತಿ ಯಿಂದ ರಾಜ್ಯ ಕಳೆದುಕೊಂಡ ಸತಾರ, ಜಯಪುರ, ಸಾಂಬಳಪುರ, ಉದಯಪುರ, ಝಾನ್ಸಿ, ನಾಗಪುರ ಮುಂತಾದ ಅರಸರು ಮತ್ತು ಅವರ ಮಂತ್ರಿಗಳು, ಅಧಿಕಾರಿಗಳೂ, ಅಭಿಮಾನಿಗಳು, ಪ್ರಜೆಗಳೂ ಅಸಮದಾನಗೊಂಡರು. ಈ ಅಸಮದಾನವೇ ಕ್ರಾಂತಿಗೆ ಕಾರಣವಾಯಿತು.

**೨) ಆಡಳಿತಾತ್ಮಕ ಕಾರಣಗಳು. ;-**

೧) ಸ್ಥಳಿಯ ಅರಸರ ಸರಕಾರ ಆಡಳಿತದ ಬದಲಾಗಿ ಬ್ರಿಟಿಷರ ಕಂಪನಿ ಸರಕಾರ ಆಡಳಿತ ವ್ಯವಸ್ಥೆ ಜಾರಿಗೆ ಬಂದದ್ದರಿಂದ, ಹಳೆಯ ಸರಕಾದ ಅಧಿಕಾರಿಗಳನ್ನೆಲ್ಲಾ ವಜಾ ಮಾಡಿತು, ವಜಾಗೊಂಡ ಅಧಿಕಾರಿಗಳ ಅಸಮದಾವೇ ಕ್ರಾಂತಿಗೆ ಕಾರಣವಾಯಿತು.

೨) ಖಾಯಂ ಭೂಕಂದಾಯ ಪದ್ದತಿಯಿಂದ ವಂಚಿತರಾದ ಜಮಿನ್ದಾರರೂ, ಬ್ರಿಟಿಷರ ವಿರುದ್ದ ತಿರುಗಿ ಬಿದ್ದರು.

೩) ಬ್ರಿಟಿಷರ ಕಂದಾಯನೀತಿಯಿಂದ ಶೋಷಿತರಾದ ರೈತರು ಅಸಮದಾನ.

೪) ಒತ್ತಾಯಪೂರ್ವಕವಾಗಿ ನೀಲಿ ಬೆಳೆ ಬೆಳೆಯುತ್ತಿದ್ದ ರೈತರ ಅಸಮದಾನ

೫) ಸಹಾಯಕ ಸೈನೀಕ ಪದ್ದತಿಯಿಂದ ನಿರ್ಗತಿಕರಾದ ಸೈನಿಕರ ಅಸಮದಾನ

೬) ಹೋಸ ವ್ಯಾಪಾರನೀತಿಯಿಂದ ವಂಚಿತರಾದ ವ್ಯಾಪಾರಸ್ಥರ ಅಸಮದಾನ

೭)ಹೊಸ ಕೈಗಾರಿಕ ನೀತಿಯಿಂದ ಜರ್ಜಿತಗೊಂಡ ನೇಕಾರರೂ, ಮೀನೂಗಾರರೂ, ಕುಶಲಕಾರ್ಮಿಕವರ್ಗ, ಗ್ರಾಮೀಣ ಗುಡಿಕಾರ್ಮಿಕರೂ, ಅಸಮದಾನಗೊಂಡರು.

**೩) ಆರ್ಥಿಕ ಕಾರಣಗಳು ;-**

೧) ಬ್ರಿಟಿಷರ ಭೂಕಂದಾಯನೀತಿಯು ಹೆಚ್ಚು ಕಂದಾಯ ನೀಡುವ ಜಮೀನ್ದಾರರಿಗೆ ಕಂದಾಯ ವಸೂಲಿ ಮಾಡುವ ಅಧಿಕಾರ ನೀಡಿರುವದರಿಂದ ರೈತರು, ಮತ್ತು ಜಮೀನ್ದಾರರೂ ಇಬ್ಬರೂ ವಂಚೀತರಾದರು.

೨) ವಿಲಿಯಂಬೆಂಟಿಂಕನ ಭೂಸುಧಾರಣೆ ನೀತಿಯು ತಲೇತಲಾಂತರದಿಂದ ಇನಾಮ್ ಭೂಮಿ ಅನುಭವಿಸುತ್ತಿದ್ದ ಪಂಡಿತರು, ಕಲಾವಿದರು, ಶಿಕ್ಷಕರು, ಧರ್ಮಗುರುಗಳು, ದೇವಾಸ್ಥಾನದ ಅರ್ಚಕರೂ, ಸಾಧು-ಸಂತರಿಂದ ಭೂಮಿಯನ್ನು ಕಸಿದುಕೊಂಡು ಅವರನ್ನು ಅಸಮದಾನಗೊಳಿಸಿತು.

೩) ಬ್ರೀಟಿಷರ ಕೈಗಾರಿಕಾನೀತಿಯು ಭಾರತವನ್ನು ಕಚ್ಚಾವಸ್ತುಗಳನ್ನು ಪೂರೈಸುವ, ಹಾಗೂ ಪಕ್ಕಾ ವಸ್ತುಗಳನ್ನು ಮಾರಾಟ ಮಾಡುವ ಮಾರಾಟಕೇಂದ್ರವನ್ನಾಗಿ ಮಾಡಿತು. ರ

೪) ಬ್ರಿಟಿಷ ಅಧಿಕಾರಿಗಳಿಗೆ ಅಧೀಕ ಸಂಬಳ, ಹೆಚ್ಚುಸವಲತ್ತು, ಆಧಿಕ ತೆರಿಗೆಯಿಂದಾಗಿ ಭಾರತದ ಅಪಾರ ಸಂಪತ್ತು ಇಂಗ್ಲೇಂಡಗೆ ಹರಿದು ಹೊಯಿತು. ಭಾರತದ ಅಭಿವೃದ್ಧಿಗೆ ಚೀಕ್ಕಾಸು ಖರ್ಚು ಮಾಡಲಿಲ್ಲಾ. ಹೀಗೆ ಭಾರತವೂ ತನ್ನ ಮರಿಗಳಿಗೆ ಉಪವಾಸವಿಟ್ಟು ಇಂಗ್ಲೇಂಡಗೆ ಹಾಲು ಉಣಿಸುವ ಹಸುವಿನಂತಾಯಿತು.

**೪) ಸಾಮಾಜಿಕ ಕಾರಣಗಳು ;-**

೧) ಭಾರತಿಯರಿಗೆ ರೈಲ್ವೆಯ ಮೊದಲವರ್ಗದ ಭೋಗಿಗಳಲ್ಲಿ ಪ್ರವೇಶ ಇಲ್ಲಾ.

೨) ಬ್ರಿಟಷರ ಎದುರಿಗೆ ಕುದರೆ ಸವಾರಿ ನಿಶೇಧ

೩) ಅಪರಾಧಿಗಳು ಬ್ರಿಟಷ ಅಧಿಕಾರಿಗಳ ಬೂಟುಗಳನ್ನು ನಾಲಿಗೆಯಿಂದ ಸ್ವಚ್ಚಗೋಳಿಸುತ್ತಿದ್ದದ್ದು.

೪) ಜೇಮ್ಸಮಿಲ್ಸ " ಬಾರತೀಯರು ಗುಲಾಮರೆಂದು ಪರಿಗಣಿಸಲು ಅರ್ಹರಾಗಿದ್ದಾರೆ, " ಎಂದು ಬಹಿರಂಗವಾಗಿ ಘೋಷಿಸಿದ್ದು

**೫) ಧಾರ್ಮಿಕ ಕಾರಣಗಳು.;-**

೧) ಭಾರತವನ್ನು ಪ್ರವೇಶಿಸಿದ ಕ್ರೈಸ್ತಧರ್ಮದ ಮೀಷನರಿಗಳು, ಹಿಂದೂದೇವತೆಗಳನ್ನೂ, ಸಂಪ್ರದಾಯಗಳನ್ನೂ ಟೀಕಿಸುತಿದ್ದ.

೨) ಹಿಂದು-ಮುಸ್ಲೀಮ್ ರನ್ನು ಬಲವಂತವಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರ

೩) ವಿಧವಾ ವಿವಾಹ, ಸತಿಸಹಗಮನ ಪದ್ದತಿ, ಬಾಲ್ಯ ವಿವಾಹ, ನಿಶೇದಿಸಿದ್ದು.

೪) ಮತಾಂತರ ಗೊಂಡವರಿಗೆ ಆಸ್ತಿ ಹಕ್ಕು ನೀಡುವ ಕಾಯ್ದೆ ಮಾಡಿದ್ದು.

೫) ಬ್ರಿಟಿಷರ ಕ್ಲಬ್‌ಗಳ ಮುಂದೆ ಭಾರತೀಯರಿಗೆ ಮತ್ತು ನಾಯಿಗಳಿಗೆ ಪ್ರವೇಶ ಇಲ್ಲಾ

**೬) ಸೈನೀಕ ಕಾರಣಗಳು ;-**

೧) ಕಂಪನಿಯ ಭಾರತಿಯ ಸೈನಿಕರ ಸಂಬಳವು ಬ್ರಿಟಿಷಸೈನೀಕರ ಸಂಬಳಕಿಂತಲೂ ಅತ್ಯಂತ ಕಡಿಮೆ ಇದ್ದದ್ದು ೧೦೦ / ೧೦.

೨) ಭಾರತಿಯ ಸೈನಿಕರಿಗೆ ಬ್ರಿಟಿಷ ಸೈನೀಕರಿಗೆ ಇದ್ದಂತಹ ಭಡ್ತಿ, ಭತ್ಯೆ ಸೌಲಭ್ಯ- ಸೌವಲತ್ತುಗಳು ಇರದೆ ಇದ್ದದ್ದು.

೩) ಭಾರತಿಯ ಸೈನೀಕರನ್ನು ಕೀಳಾಗಿ ಕಾಣುತ್ತೀದ್ದದ್ದು.

೪) ಭಾರತಿಯ ಸೈನೀಕರನ್ನು ಮತಾಂತರಿಸಲು ಪ್ರಯತ್ನಿಸುತ್ತಿರುವದು

೫) ಭಾರತಿಯ ಸೈನೀಕರು, ಬ್ರಿಟಿಷ ಸೈನೀಕರಿಗಿಂತ ಅತ್ಯಂತ ಹೆಚ್ಚಿನ ಸಂಖ್ಯೇಯಲ್ಲಿದ್ದು ಆಯಾಕಟ್ಟಾದ ಸ್ಥಳಗಳಲ್ಲಿ ಕೇಂದ್ರಕೃತರಾಗಿದ್ದು.

**೭) ತಕ್ಷಣದ ಕಾರಣ ;-**

೧) ೧೮೫೬ ರಲ್ಲಿ ಕ್ಯಾನಿಂಗ್ "ಜನರಲ್ ಸರ್ವೀಸ್ ಎನ್ ಲಿಸ್ಟಮೆಂಟ್ " ಕಾಯ್ದೆಯನ್ನು ಜಾರಿಗೆ ತಂದದ್ದು.

೨) ಹೊಸದಾಗಿ ಎನ್ ಫೀಲ್ಡ್ ಬಂದಕೂಗಳನ್ನು – ತೊಟಾಗಳನ್ನು ಪರೀಚಯಸಿದ್ದು. (ಹಂದಿ-ಹಸುವಿನ ಕೊಬ್ಬನ್ನು ಸವರಿದ ತೋಟಾಗಳಾಗಿದ್ದವು)

ಕ್ರಾಂತಿಯ ಹರಡುವಿಕೆ.

ಮೊಘಲ್ ಚಕ್ರವರ್ತಿ ಬಹದ್ದೂರ ಷಹಾ, ಮರಾಠರ ಮಾಜಿ ಪೇಶ್ವೇ ನಾನಾಸಾಹೇಬ್, ಅವನ ಬಂಟ ತ್ಯಾತ್ಯಟೋಪಿ, ಝಾನ್ಸಿಯ ರಾಣಿ ಲಕ್ಷೀಬಾಯಿ, ಔದ್ಧದ ರಾಣಿ ಹಜರತ್ ಬೇಗಂ, ಅವಳ ಮಾಜಿ ದಿವಾನ ಕುವಾರಸಿಂಗ್, ಬಂಗಾಳದ ಮಾಜಿ I.A.S ಅಧಿಕಾರಿ ಜಗದೀಶ ಜ್ವಾಲಾ, ಮಹಾರಾಷ್ಟ್ರದ ವಾಸುದೇವ ಬಲವಂತ ಘಟಕೆ, ಸುರುಪುರದ ನಾಲ್ಕನೇಯ ರಾಜಾ ವೆಂಕಟಪ್ಪನಾಯಕ, ನರಗುಂದಾದ ಬಾಬಸಾಹೇಬ, ಮತ್ತು ಮುಂಡರಗಿಯ ಭೀಮರಾಯ. ಇನ್ನೂ ಮುಂತಾದ ಬ್ರಿಟಿಷರಿಂದ ನೊಂದ ಅರಸರೂ,ಮಾಜಿ ಅಧಿಕಾರಿಗಳೂ, ಸೈನಾನಾಯಕರ ಒಂದಾಗಿ ಸಂಘಟತರಾದರು.

೧೮೫೭ ಜೂನ್ ೨೨ ರಂದು ದೇಶದ ಎಲ್ಲಾ ಕಡೆ ದಂಗೆ ಏಳಬೇಕೆಂದು ನಿರ್ಧಾರ

೧) ಈ ಸಂದೇಶವನ್ನು ಚಪಾತಿ & ಕಮಲ ಹೂವಿನ ಮೂಲಕ ಪ್ರಸಾರ.

೨) ಅಗಸರಿಂದ ಮನೆ-ಮನೆಗಳಿಗೆ ಪ್ರಸಾರ

೩) ಬಳೆಗಾರರಿಂದ ಹಳ್ಳಿ-ಹಳ್ಳಿಗೆ ಪ್ರಸಾರ.

೪) ಸನ್ಯಾಸಿಗಳಿಂದ ದೂರದ ಪ್ರದೇಶಗಳಿಗೆ ಪ್ರಸಾರ

೫) ಧರ್ಮಾಧಿಕಾರಿಗಳಿಂದ ಯಾತ್ರಾಸ್ಥಳಗಳಿಗೆ ಬರುವ ದೂರದ ಭಕ್ತರಲ್ಲಿ ಪ್ರಸಾರ.

" ಖಲಕ್ ಕುಂದಾಕಾ, ಮುಲಕ್ ಬಾದಷಹಾಕಾ, ಹುಕ್‌ಮತ್ ರಾಣೀ ಲಕ್ಷ್ಮೀಬಾಯಿ ಔರ್ ಪೇಶ್ವೇ ನಾನಾಸಾಹೇಬ್ ಕೀ, ಮಾರೋ ಫೀರಂಗೀಕೊ."

ಆದರೆ

೧) ೧೮೫೭ ರ ಮಾರ್ಚ ೨೯ ರಂದು ಬ್ಯಾರಕಪುರ ಸೈನಿಕ-ಶಿಬಿರದಲ್ಲಿ ಬ್ರಾಹ್ಮಣರ ಮಂಗಲ ಪಾಂಡೆ ಎಂಬ ಸೇನ ನಾಯಕ ಬ್ರಿಟಿಷರ ಮೇಜರ್ ಹ್ಯೂಸನ್ ನನ್ನು ಗುಂಡಕ್ಕಿ ಕೊಲೆ ಮಾಡುವದರ ಮೂಲಕ ಕ್ರಾಂತಿಗೆ ನಾಂದಿ ಹಾಡಿದನು.

೨) ೧೮೫೭ ರ ಎಪ್ರೀಲ್ ೩ ರಂದು ಬಹರಾಮ್‌ಪುರ ದಲ್ಲಿ ಸೈನೀಕರು ದಂಗೆ ಪ್ರಾರಂಬಿಸಿದರು

೩) ೧೮೫೭ ಎಪ್ರೀಲ್ ೮ ರಂದು ಅಂಬಾಲದಲ್ಲಿ ಸೈನ್ಯ ಶಿಬಿದಲ್ಲಿ ಕ್ರಾಂತಿಯ ಜ್ವಾಲೆ ಹರಡಿತು

೪) ಮೇ ತಿಂಗಳದೊಳಗೆ ಮಿರತ್, ರೋಹಿಖಂಡ, ಬುಂದೇಲ್‌ಖ0ಡ, ಡೋಬಾ, ಗಳಲ್ಲಿ ಸೈನೀಕರು ದಂಗೆ ಪ್ರಾರಂಬಿಸಿದರು ೫) ಝಾನ್ಸಿಯಲ್ಲಿ ರಾಣಿ ಲಕ್ಷ್ಮೀಬಾಯಿ, ಕಾನ್ಪೂರದಲ್ಲಿ ನಾನಾಸಾಹೇಬ್, ಲಕ್ನೋದಲ್ಲಿ ತಾತ್ಯಟೋಪಿ, ಔದ್ಧದಲ್ಲಿ ಹಜರತ್ ಬೇಗಂ, ಕಲ್ಕತ್ತಾದಲ್ಲಿ ಕುವಾರಸಿಂಗ್, ಡಾಕಾದಲ್ಲಿ ಜಗದೀಶಜ್ವಾಲಾ, ದಂಗೆಯನ್ನು ಪ್ರಾರಂಬಿಸಿದರು.

**ದ0ಗೆಯ ಪ್ರಕಾರ ರೀತಿ ;-**

೧) ಸೆರೆಮನೆಯಲ್ಲಿದ್ದ ಖೈದಿಗಳ ಬೀಡುಗಡೆ.,

೨) ಬ್ರಿಟಿಷರ ಖಜಾನೆ ಮತ್ತು ಕಛೇರಿಗಳನ್ನು ಲೂಟಿ ಮಾಡದು.

೩) ಬ್ರಿಟಿಷರ ಪೋಲಿಷ ಠಾಣೆಗಳನ್ನು ಸೈನೀಕ ಶಿಬಿರಗಳನ್ನ ಸುಡುವದು, ಮತ್ತು ಅವರ ಆಯುಧಗಳನ್ನು ಕಸಿದುಕೊಳ್ಳವದು. ೪) ಬ್ರಿಟಿಷರ ಅಧಿಕಾರಿಗಳನ್ನು ಸಿಕ್ಕಲ್ಲಿ ಕೊಲ್ಲುವದು. ಮತ್ತು ಇತರೆ

೧೮೫೭ ಜೂನ್ ೨೪ ರಂದು ದೆಕಲಿಯನ್ನು ಪ್ರವೇಶಿಸಿದ ಕ್ರಾಂತಿಕಾರರು ಕೆಂಪು ಕೋಟೆ, ಕೆಂಪು ಅರಮನೆಯನ್ನು ಪ್ರವೇಶಸಿ ೮೦ ವಯಸ್ಸಿನ ಮೊಘಲ್‌ರ ಭಹದ್ದೂರ್ ಷಹ ನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿರು.

**ಕ್ರಾಂತಿಯ ದಮನ. ;-**

ಪಂಜಾಬದ ಸಿಖ್ ಪಡೆ, ನೇಪಾಳದ ಗೊರ್ಖಪಡೆ, ದಕ್ಷೀಣದ ಡೆಕ್ಕನ್ ಪಡೆ, ಹಾಗೂ ಹೈದರಾಬಾದಿನ ನೀಜಾಮ, ಮೈಸೂರಿನ ಒಡೆಯರು, ಮರಾಠರ ದಿನಾಕರರಾವೂ ಸಿಂದ್ಯಾ, ಕಾಶ್ಮೀರದ ಗುಲಾಬ್ ಸಿಂಗ್, ನಭಾ, ಪಟೇಯಾಲಾದ ಮತ್ತು ಮುಂತಾದ ಅರಸರು, ಅದೇ ರೀತಿ ಅನೇಕ ಜಮೀನ್ದಾರರು ಬ್ರೀಟಿಷರಿಗೆ ತಮ್ಮ ತನು, ಮನ, ಧನಗಳಿಂದ ಸಹಾಯ ಮಾಡಿದರು. ಇದರಿಂದ ಗವರ್ನರ ಜನರಲ್ ಲಾರ್ಡಕ್ಯಾನಿಂಗ್ ಶಕ್ತಿಸಂಪನ್ಮೂಲಗಳನ್ನು ಒಂದುಗೊಡಿಸಿಕೊ0ಡು ಕ್ರಾಂತಿಯ ದಮನಕ್ಕೆ ಮುಂದಾದನು.

೧೮೫೭ ರ ಸಪ್ಟಂಬರ ೨೦ ರಂದು ಲಾರ್ಡಕ್ಯಾನಿಂಗನು ತನ್ನ ದಂಡನಾಯಕರುಗಳಾದ ಸರ್ ಜಾನ್ ಲಾರೆನ್ಸ, ಅರ್ಚಡೆಲ್, ಜಾನ ನೀಚಲ್ ಸನ್ಸ್, ರ ನೇತೃತ್ವದಲ್ಲಿ ದೆಹಲಿಯನ್ನು ಮುತ್ತಿಗೆ ಹಾಕಿ ಫಿರಂಗಿ, ಗೂಂಡಿನ ಮಳೆಗೆರಿದರು. ಸಾವಿರಾರು ಜನ ಮರಣಹೊಂದಿದರು.ಭಹದ್ದೂರಷಹನ ಮಕ್ಕಳೂ-ಮೊಮ್ಮಕ್ಕಳುರನ್ನು ಕೊಲ್ಲಲಾಯಿತ ಸೆರೆಸಿಕ್ಕ ೮೦ ವರ್ಷದ ಬಹದ್ದೂರಷಹನನ್ನು ರಂಗೂನ ಕಾರಗೃಹಕ್ಕೆ ೧೮೬೨ ಮರಣ

೨) ೧೮೫೭ ರ ನವಂಬರ ೧೮ ರಂದು ಬ್ರಿಟಿಷರ ಜನರಲ್ ಗಳಾದ ಹ್ಯಾಮಲಾಕ್, ನೇಯಿಲ್ ರ ನೇತೃತ್ವ ದಲ್ಲಿ ಕಾನಪುರವನ್ನು ಮುತ್ತಿಗೆ ಹಾಕಿ ನಾನಾಸಾಹೇಬನನ್ನು ಸೋಲಿಸಿದರು. ನಾನಾಸಾಹೇಬ ನೇಪಾಳಕ್ಕೆ ಪಲಾಯನ

೩) ೧೮೫೭ ಡಿಸಂಬರ್ ೨೨ ರಂದು, ತಾತ್ಯಟೋಪಿ ಯನ್ನು ಸೆರೆ ಹಿಡಿದು ಚಿತ್ರಹಿಂಸೆ ನೀಡಿ ಗಲ್ಲಿಗೇರಿಸಲಾಯಿತು.

೪) ೧೮೫೮ ರ ಮಾರ್ಚ ತಿಂಗಳಲ್ಲಿ, ಔಧ್ & ಲಕನೌ ದಲ್ಲಿ ಹಜರತ್ ಬೇಗಂಳನ್ನು ಸೋಲಿಸಿ ಕೊಲ್ಲಾಯಿತು- ಅವಳ ದತ್ತುಪುತ್ರ ನನ್ನು ಬಂದಿಸಿ ಕಾರಗೃಹಕ್ಕೆ.

೫) ೧೮೫೮ ಜೈನ ೧೭ ರಂದು ಸರ್ ಹೊಜರೋಜ್ ನಾಯಕತ್ವದಲ್ಲಿ ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯನ್ನು ರಣರಂಗದಲ್ಲಿ ಕೊಲ್ಲಲಾಯಿತು.

೧) ಕ್ರಾಂತಿಯು ೧೮೫೭ರ ಮಾರ್ಚ ೨೯ ರಿಂದ ಪ್ರಾರಂಬವಾಗಿ ೧೮೫೮ ಜೂನ್ ೨೮ ರವರೆಗೆ ಸಂಪೂರ್ಣವಾಗಿ ಮೂಕ್ತಾಯವಾಯಿತು.

**ಕ್ರಾಂತಿಯ ವಿಫಲತೆಗೆ ಕಾರಣಗಳು.**

೧) ಕ್ರಾಂತಿಯು ಕಲವೇ ಪ್ರದೇಶಗಳಿಗೆ ಸೀಮಿತವಾಗಿತ್ತು.

೨) ಭಾರತಿಯ ಕೇಲ ಅರಸರು ಆಂಗ್ಲರಿಗೆ ತೊರಿದ ನಿಷ್ಠೆ.

೩) ಎರಡನೇಯ ಹಂತದ ನಾಯಕತ್ವದ ಕೊರತೆ.

೪) ನಿರ್ಧಾರಿಸಿದ ದಿನಾಂಕಿನಗಿ0ತ ಮುಂಚೆಯೇ ಕ್ರಾಂತಿಯು ಪ್ರಾರಂಭವಾಗಿದ್ದು.

೫) ಕ್ರಾಂತಿಯು ಏಕ ಉದ್ದೇಶ ಹೊಂದಿರಲಿಲ್ಲ.

೬) ವ್ಯಾಪಕ ಸಂಪರ್ಕದ ಕೊರತೆ.

೭) ಕ್ರಾಂತಿಕಾರರಲ್ಲಿ ಶಸಾಸ್ತ್ರಗಳ ಕೊರತೆ.

೮) ೧೮೫೭ ರ ವರ್ಷ ಬ್ರಿಟಿಷರ ವಿಜಯವರ್ಷವಾಗಿತ್ತು.

**೧೮೫೭ ರ ಕ್ರಾಂತಿಯ ಪರಿಣಾಮಗಳು.**

೧.) ರಾಜಕೀಯ ಪರಿಣಾಮಗಳು.

೨) ಆಡಳಿತಾತ್ಮಕ ಪರಿಣಾಮಗಳು.

೩) ಸೈನೀಕ ಪರಿಣಾಮಗಳು.

೪) ಸಮಾಜಿಕ ಪರಿಣಾಮಗಳು.

೫) ಧಾರ್ಮಿಕ ಪರಿಣಾಮಗಳು.

೬) ರಾಷ್ಟ್ರೀಯ ಪ್ರಜ್ಞೆಯ ಬೆಳವಣಿಗೆ.

**೧.) ರಾಜಕೀಯ ಪರಿಣಾಮಗಳು.**

೧) ಈಸ್ಟ ಇಂಡಿಯಾ ಕಂಪನಿ ಸರಕಾರದ ಕೊನೆ

೨) ಬ್ರಿಟಿಷ ಸಂಸ್ಥೇಯ ನೇರ ಸರಕಾರ. ( ಭಾರತದ ಮ್ಯಾಗ್ನಕಾರ್ಟ )

೩) ೧೮೫೮ ಅಗಸ್ಟ ೨೦. ರಂದು ಮಹಾರಾಣಿಯ ಘೋಷಣೆ (ಅಲಹಾಬಾದನಲ್ಲಿ)

೪) ೧೫ ಜನರ ಆಡಳಿತ ಮಂಡಳಿಯ ರಚನೆ.

**೨) ಆಡಳಿತಾತ್ಮಕ ಪರಿಣಾಮಗಳು.**

೧) ದೇಶಿಯ ರಾಜ-ಮಹಾರಾಜರ ವಿರುದ್ಧ ಆಕ್ರಮಣ ನೀತಿ ಬಿಟ್ಟರು.

೨) ದತ್ತುಪುತ್ರರಿಗೆ ಹಕ್ಕಿಲ್ಲಾ ಕಾಯ್ದೆಯ ರದ್ದತಿ.

೩) ಗವರ್ನರ ಜನರಲ್ ಹುದ್ದೆಯ ಬದಲಾಗಿ ವೈಸರಾಯ್ ಹುದ್ದೆಯ ಪರಿಚಯ

೪) ಭಾರತಿಯ ಅರಸರಿಗೆ ಗೌರವ- ಬಿರುದುಗಳಿಂದ ಗೌರವಿಸಲಾಯಿತು.

೫) ದೇಶಿಯ ರಾಜಸಂಸ್ಥಾನಗಳ ಆಡಳಿತವನ್ನು ಸ್ಥಳಿಯ ಅರಸರಿಗೆ ನೀಡಲಾಯಿತು.

೬) ಬ್ರಿಟಿಷ ಕಾಯ್ದೆಗಳಿಗೆ & ನ್ಯಾಯಾಲಯಗಳಿಗೆ ಮಹತ್ವ

**೩) ಸೈನೀಕ ಪರಿಣಾಮಗಳು.**

೧) ಬ್ರಿಟಿಷ ಸೈನೀಕರನ್ನು ಹೆಚ್ಚಿನ ಸಂಖ್ಯಯಲ್ಲಿ ನೇಮಕ.

೨)ಪ್ರತಿ ಸೈನೀಕ ಶಿಬಿರದಲ್ಲಿ ಭಾರತಿಯ&ಬ್ರಿಟಿಷರನ್ನು ೧;೩ ಅನುಪಾತದಲ್ಲಿರಿಸಿದರು

೪) ಸಿಡಿಮದ್ದು ಪಡೆಯನ್ನು ಸಂಪೂರ್ಣವಾಗಿ ಬ್ರಿಟಿಷ ಸೈನೀಕರ ವಶಕ್ಕೆ.

೫) ಭಾರತಿಯ ಸೈನೀಕರ ಸಂಬಳ, ಭತ್ಯ ಸೌಲಭ್ಯಗಳನ್ನು ಹೆಚ್ಚಿಸಲಾಯಿತು.
೬) ಬ್ರಾಹ್ಮಣ, ರಜಪೂತ ಮರಾಠರನ್ನು, ಹಾಗೂ ಮುಸ್ಲೀಂರನ್ನು ಸೈನ್ಯದಿಂದ ದೂರ
೭) ಗೋರ್ಖಾ, ಸಿಖ್, ಪಠಾಣರಿಗೆ ಹೆಚ್ಚಿನ ಪ್ರಾತಿನಿಧ್ಯ

**೪) ಸಮಾಜಿಕ ಪರಿಣಾಮಗಳು.**

೧) ಭಾರತೀಯ ಹಿಂದು-ಮುಸ್ಲೀ೦ ರ ಅಸಕ್ತತೆಯನ್ನು ಅರಿಯಲು ಪ್ರಾರಂಬಿಸಿದರು.
೨) ರಚನಾತ್ಮಕವಾಗಿ ಭಾರತೀಯ ಸಮಾಜವನ್ನು ಒಡೆಯುವ ನೀತಿ.
೩) ಮುಸ್ಲೀಂರನ್ನು ಎತ್ತಿ ಕಟ್ಟುವ ಕೆಲಸ ಪ್ರಾರಂಬಿಸಿದರು.

**೫) ಧಾರ್ಮಿಕ ಪರಿಣಾಮಗಳು.**

೧) ಬ್ರಿಟಿಷರ ಆಡಳಿತದಪರಿಣಾಮ ಭಾರತಿಯರು ಪಾಶ್ಚೀಮತ್ಯ ಸಂಸ್ಕೃತೀಯ ಪ್ರಭವಾಕ್ಕೆ ಒಳಗಾಗಿದ್ದರು.
೨) ಕ್ರೆöÊಸ್ತ ಮೀಷನರಿಗಳು ಹಿಂದೂಧರ್ಮದ ದೌರ್ಬಲ್ಯಗಳನ್ನ ತಮ್ಮ ಧರ್ಮದ ಪ್ರಸಾರಕ್ಕಾಗಿ ಬಳಿಸಿಕೊಳ್ಳುತ್ತಿದ್ದರು. ಇದರ ಪರಿಣಾಮವಾಗಿ ಹಿಂದೂಧರ್ಮದ, ಭಾರತೀಯ ಸಂಸ್ಕೃತೀಯ ಜಾಗೃತಿ ಪ್ರಾರಂಬವಾಯಿತು.
೧೮೬೭ ರಲ್ಲಿ ಡಾ|| ಆತ್ಮರಾಮಪಾಂಡುರ೦ಗರು ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿದರು, ದಯಾನಂದ ಸರಸ್ವತಿಯವರು ಆರ್ಯಸಮಾಜವನ್ನು ಸ್ಥಾಪಿಸಿದರು, ರಾಜಾರಾಮಮೋಹನ್‌ರಾಯ ಬ್ರಹ್ಮಸಮಾಜ ಸ್ಥಾಪಿಸಿದರು. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮೀಷನ್ ಸ್ಥಾಪಿಸಿದರು.
ಮುಸ್ಲೀಂರು ಅಲಿಗಢ ಚಳುವಳಿ ಪ್ರಾರಂಬಿಸಿದರು

**೬.) ರಾಷ್ಟ್ರೀಯ ಪ್ರಜ್ಞೆಯ ಬೆಳವಣಿಗೆ.**

೧) ಬ್ರಿಟಿಷರ ಆಡಳಿತ ಪ್ರಭಾವದಿಂದಾಗಿ ಭಾರತೀಯರಲ್ಲಿ ತಾವೇಲ್ಲಾರು ಒಂದು ಎಂಬ ಭಾವನೆ ಮೂಡಲಾರಂಬಿಸಿತು.
೨) ವಿದ್ವಾಂಶರು,ಇತಿಹಾಸಕಾರರು, ಭಾರತಿಯ ಇತಿಹಾಸವನ್ನು ರಚಿಸಲಾರಂಬಿಸಿದ್ದರಿ೦ದ ಭಾರತಿಯರಲ್ಲಿ ತಮ್ಮ ಬಗ್ಗೆ ಅಭಿಮಾನ ಮೂಡಲಾರಂಬಿಸಿತು.
೩) ಬ್ರಿಟಿಷರ ಪ್ರಭಾವದಿಂದಾಗಿ ಸಂಘ-ಸ೦ಸ್ಥೆಗಳನ್ನ ಕಟ್ಟಿಕೊಳ್ಳಲಾರಂಬಿಸಿದರು ಇಂಡಿಯನ್ ಸೊಸೈಟಿ, ಲ್ಯಾಂಡ್ ಹೋಲ್ಡ್ರ್ಸ ಸೂಸೈಟಿ, ಬ್ರಿಟಿಷ-ಇಂಡಿಯಾ ಸೂಸೈಟಿ, ಬಾಂಬೆ ಸೂಸೈಟಿ, ಸಾರ್ವಜನೀಕ ಸಭಾ, ಮಹಾಜನ ಸಭಾ,

೧೮೫೭ ರ ಕ್ರಾಂತಿಯ ಸ್ವರೂಪವನ್ನುಕುರಿತು ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯಗಳಿಲ್ಲ.ಕೆಲವು ವಿದೇಶಿ ವಿದ್ವಾಂಸರು ಈ ಘಟನೆಯ ಮಹತ್ವವನ್ನು ಕಡೆಗಣಿಸಿದ್ದಾರೆ. ಭಾರತೀಯ ಇತಿಹಾಸಕಾರರು ಈಘಟನೆಯ ಮಹತ್ವವನ್ನು ಎತ್ತಿ ತೋರಿಸಿದ್ದಾರೆ. ವಿದ್ವಾಂಸರಲ್ಲಿ ಎರಡು ಅಭಿಪ್ರಾಯಗಳಿವೆ.
೧) ಈ ಘಟನೆ ಸಿಪಾಯಿ ದಂಗೆ. ಎಂದು ೨) ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೇ.

**೧) ಈ ಘಟನೆ ಸಿಪಾಯಿ ದಂಗೆ. ಎಂದು** ಸರ್‌ಜಾನ್‌ಲಾರೆನ್ಸರು ;- ಈ ದಂಗೆಯು ಮೂಲತಹ ಸೈನ್ಯದಲ್ಲಿ ಉದ್ಭವಿಸಿತು.ಕೊಬ್ಬುಸವರಿದ ತೋಟಾಗಳ ಬಳಕೆಯೇ ಈ ದಂಗೆಗೆ ಮೂಲ ಕಾರಣವಾಗಿತ್ತೇ ಹೊರತು ಬೇರಾವ ಕಾರಣವಿಲ್ಲಾ.
ಸರ್ ಜಾನ್ ಶೀಲೆ ;- ೧೮೫೭ ರ ದಂಗೆಯು ಸ್ವಾರ್ಥ ಸೈನಿಕರ ದಂಗೆಯಾಗಿದ್ದು ಇದಕ್ಕೆ ಸ್ಥಳಿಯರ ನಾಯಕತ್ವವಾಗಲೀ ಜನತೆಯ ಬೆಂಬಲವಾಗಲೀ ಇರಲಿಲ್ಲ.
ಥಾಮಸನ್ & ಗ್ಯಾರಟರ್ ;- ಇದು ಒಂದು ಸೈನಿಕ ದಂಗೆ ಅಥವಾ ಭಾರತದ ಅರಸರು, ಜಮೀನ್ದಾರರು, ತಾವೂ ಕಳೆದುಕೊಂಡ ಹಕ್ಕುಬಾಧ್ಯತೆಗಳನ್ನು ಮರಳಿಪಡೆಯಲು ಮಾಡಿದ ಪ್ರಯತ್ನ.
ವೈಟ್ ;- ೧೮೫೭ ರ ದಂಗೆಯು ರಾಷ್ಟ್ರೀಯ ಚಳುವಳಿಯಾಗಿರಲಿಲ್ಲ. ಅದು ಸಂಪೂರ್ಣ ಸೈನೀಕ ದಂಗೆಯಾಗಿತ್ತು. ಅದು ಒಂದು ವೇಳೆ ರಾಷ್ಟ್ರೀಯ ಚಳುವಳಿಯಾಗಿದ್ದಲ್ಲಿ ಯಸಶ್ವೀಯಾಗುತಿತ್ತು.

**೨) ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೇ.**

೧) ವಿ,ಡಿ.ಸಾವರಕರ ;- ೧೮೫೭ ರ ಕ್ರಾಂತಿಯು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಾಗಿದೆ. ಇದು ಭಾರತಿಯರು & ಭಾರತೀಯ-ಸೈನೀಕರು ಧೈರ್ಯ-ಸಹಾಸದಿಂದ ತಮ್ಮ ಸ್ವಧರ್ಮ & ಸ್ವರಾಜ್ಯ ಸಾಧನೆಗಾಗಿ ಬ್ರಿಟಿಷರ ವಿರುದ್ಧ ನೇಡಿಸಿದ ಪ್ರಥಮ ಹೋರಾಟವಾಗಿತ್ತು.

೨) ಅಶೋಕ ಮೆಹ್ತಾ ;-೧೮೫೭ ರ ಮಹಾದಂಗೆಯು ಸಿಪಾಯಿಗಳು ಮತ್ತು ಸಹಸ್ರಾರು ನಾಗರೀಕರು ಭಾರತವನ್ನು ಆಂಗ್ಲರ ಭಂಧನದ ಸರಪಳಿಯಿಂದ ಮುಕ್ತ ಮಾಡುವ ಹೋರಾಟ.

೩) S.S. ಸೇನ್ ;- ೧೮೫೭ ರ ದಂಗೆಯನ್ನು ಕೇವಲ ಸಿಪಾಯಿ ದಂಗೆ ಎಂದು ಕರೆದರೆ ಅನರ್ಥವಾಗುತ್ತದೆ. ಧರ್ಮಕ್ಕಾಗಿ ಪ್ರಾರಂಬವಾದ ಹೋರಾಟವೂ ಸ್ವಾತಂತ್ರ್ಯಯಸಮರವಾಗಿ ಪರಿವರ್ತನೆಗೊಂಡಿತು.

೪) ಗವರ್ನರ ಲಾರ್ಡ ಕ್ಯಾನಿಂಗ್ ;- ನಾವು ಎದುರಿಸಬೇಕಾಗಿ ಬಂದಿರುವ ಈ ಹೋರಾಟವು ಸಾಮಾನ್ಯವಾದ ಸ್ಥಳಿಯ ದಂಗೆಯಾಗಿರದೇ ರಾಷ್ಟ್ರೀಯ ಸಮರದಂತೆ ಭಾಸವಾತ್ತಿತ್ತು.

೫) ಕೆ.ಎಮ್. ಫಣಿಕರ ;- ಯಾವೂದೇ ರಾಷ್ಟ್ರೀಯ-ಚಳುವಳಿಯ ಉದ್ದೇಶ ಸ್ವಾತಂತ್ರ್ಯಯ ಸಂಪಾದನೆ ಯಾಗಿರುತ್ತದೆ. ಅದೇ ರೀತಿ ೧೮೫೭ ರ ಮಹಾಚಳುವಳಿ ಯ ಉದ್ದೇಶವೂ ಆಂಗ್ಲರ ಬಂಧನದಿ0ದ ಭಾರತವನ್ನು ವಿಮೋಚನೆ ಗೋಳಿಸುವದಾಗಿತ್ತು.